SEVA BHARATHI
सेवा ही परमो धर्मः
ಸಂಚಿಕೆ : 07
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಜುಲೈ 2023
ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆ, ಉಡುಪಿ ಸದಸ್ಯರಿಂದ ಧನಸಹಾಯ



## ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ

## ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಮತ್ತು ಮಕ್ಕಳ ರಕ್ಷಣಾ ನೀತಿ ಬಗ್ಗೆ ಜಾಗೃತಿ ಕಾರ್ಯಾಗಾರ

## ಉಡುಪಿ, ಕೊಡಗು ಜಿಲ್ಲೆಗಳ ಶಾಲಾ-ಕಾಲೇಜುಗಳಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ

## ಸಂಪನ್ನಗೊಂಡ 25 ನೇ ಮಹಿಳೆಯರಿಗಾಗಿನ ಉಚಿತ ಟೈಲರಿಂಗ್ ತರಬೇತಿ

## ಉದ್ಯೋಗಕ್ಕೆ ಮತ್ತೆ ಕೈಹಿಡಿದ ಗೇರುಬೀಜ ಕಾರ್ಖಾನೆ

ಯಶೋಗಾಥೆ

## ಬೆನ್ನುಹುರಿ ಅಪಘಾತಕ್ಕೊಳಗಾದ ಉಡುಪಿಯ ಸುಮತಿ ನಾಯ್ಕ್

## ನಮ್ಮಿಂದಿಷ್ಟು

ನಮ್ಮೆಲ್ಲರ ಎರಡು ವಿಷಯಗಳನ್ನು ಪ್ರಸ್ತಾಪಿಸಲೇ ಬೇಕಿದೆ. ನಿರಂತರ 10 ವರ್ಷಗಳ ಸತತ ಪರಿಶ್ರಮಗಳಿಂದಾಗಿ ಉಜಿರೆ–ಧರ್ಮಸ್ಥಳ ರಾಜ್ಯ ಹೆದ್ದಾರಿಯ ಬಳಿ ಕನ್ಯಾಡಿಯ ನಮ್ಮ ಕಾರ್ಯಾಲಯ ಸೇವಾನಿಕೇತನದ ಒತ್ತಿನಲ್ಲೇ 10 ಸೆಂಟ್ಸ್ ಸರಕಾರದಿಂದ ಮಂಜೂರಾಗಿ ಪಹಣಿಯೂ ಕೈಸೇರಿರುವುದು ಇದೇ ತಿಂಗಳಲ್ಲಿ ಎಂದು ತಮಗೆಲ್ಲರಿಗೂ ತಿಳಿಸಲು ಹರ್ಷವಾಗುತ್ತಿದೆ. ಮುಂದಿನ ಹಂತ ಕಟ್ಟಡ ನಿರ್ಮಾಣ ಪ್ರಾರಂಭ.

ಬೆನ್ನುಹುರಿ ಮುರಿತದಿಂದಾಗಿ ಜೀವನ ಹೈರಾಣ ವಾಗಿಸಿರುವ ಈ ದಿವ್ಯಾಂಗತೆ ಬಗ್ಗೆ ಸರಕಾರವನ್ನು ಎಚ್ಚರಿಸುವ ಕೆಲಸವನ್ನು ಪುತ್ತೂರಿನ ಶಾಸಕರಾದ ಶ್ರೀ ಅಶೋಕ್ ಕುಮಾರ್ ರೈಯಿಂದ ಸಾಮಾಜಿಕ ಬದ್ಧತೆಯನ್ನು ನಾವೆಲ್ಲ ಒಕ್ಕೊರಲಿನಿಂದ ಅಭಿನಂದಿಸಲೇಬೇಕಿದೆ. ಎಲ್ಲ ದಿವ್ಯಾಂಗರ ಪ್ರತಿನಿಧಿಯಾಗಿ ಅವರನ್ನು ಭೇಟಿಯಾಗಿ ಮುಂದಿನ ದಿನಗಳಲ್ಲಿ ಆಗಬೇಕಾದ ಸರಕಾರಿ ಆದೇಶವನ್ನು ಜಾರಿ ಮಾಡಲು ಒತ್ತಾಯಪಡಿಸಿರುತ್ತೇವೆ. ಶಾಸಕರು ಸ್ಪಂದಿಸಿರುವುದು ನಮ್ಮ ಹೆಮ್ಮೆಯ ಸಂಗತಿ.

ನನ್ನ 53ರ ಸಂಭ್ರಮವನ್ನು ನಮ್ಮೆಲ್ಲ ಸಿಬ್ಬಂದಿಗಳು ಸೇರಿ ಸೇವಾಧಾಮದಲ್ಲಿ ಹಲವು ಸೇವಾಕಾರ್ಯಗಳನ್ನು ಮಾಡುವುದರ ಮೂಲಕ ನನಗೂ ಅಚ್ಚರಿಯನ್ನುಂಟು ಮಾಡಿರುವುದಲ್ಲದೆ ಇನ್ನಷ್ಟು ಪರಿಣಾಮಕಾರಿಯಾದ ಕಾರ್ಯವೈಖರಿಗೆ ಶುಭ ಹಾರೈಸಿರುತ್ತಾರೆ. ಧನ್ಯೋಸ್ಮಿ.

ಉಡುಪಿ ಜಿಲ್ಲೆಯ 7 ಕಾಲೇಜಿನ 706 ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಜಾಗೃತಿ ಕಾರ್ಯಕ್ರಮಗಳು ನಡೆದಿವೆ. ಉತ್ತಮ ಪ್ರತಿಕ್ರಿಯೆಗಳು ಶಾಲಾ ಆಡಳಿತ ಹಾಗೂ ಉಪನ್ಯಾಸಕರಿಂದ ಬಂದಿವೆ. ವಿದ್ಯಾರ್ಥಿಗಳಿಗೂ ಒಂದು ವಿಶೇಷವಾಗಿ ಈ ದಿವ್ಯಾಂಗತೆಯ ಬಗ್ಗೆ ಕುತೂಹಲ ಮೂಡಿಸುವಲ್ಲಿ ಜಾಗೃತಿ ಕಾರ್ಯಕ್ರಮ ಯಶ ಕಂಡಿದೆ.

ಸೇವಾಭಾರತಿಗೆ 20ರ ಸಂಭ್ರಮ. ಇಡೀ ವರ್ಷ ವಿಭಿನ್ನ ರೀತಿಯಲ್ಲಿ ಸೇವಾಕಾರ್ಯಗಳನ್ನು ಹಮ್ಮಿಕೊಳ್ಳಲು ನಿಶ್ಚಯಿಸಿರುತ್ತೇವೆ. ಒಟ್ಟಿನಲ್ಲಿ ಸೇವೆಯೇ ಪರಮಧರ್ಮ ಆಗಬೇಕಿರುವುದು.

ಸೆಪ್ಟೆಂಬರ್‌ಬಲ್ಲಿ ಸೇವಾಧಾಮಕ್ಕೆ 5ರ ಸಂಭ್ರಮ. ಅದಕ್ಕಾಗಿ ಸೆಪ್ಟೆಂಬರ್‌ನಲ್ಲಿ ರಾಜ್ಯಮಟ್ಟದ ರಿಹ್ಯಾಬ್ ಮೇಳ ಮತ್ತು ಕಾರ್ಯಾಗಾರವನ್ನು ನಡೆಸಲು ಯೋಜಿಸಿದ್ದೇವೆ. ಹಲವಾರು ಉದ್ದೇಶಗಳ ಈ 3 ದಿನಗಳ ಮೇಳಕ್ಕೆ ತಾವೆಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಬೇಕಿದೆ. ಸರಕಾರಕ್ಕೂ ಬಿಸಿ ಮುಟ್ಟಿಸಬೇಕಾಗಿದೆ. ಮುಂದಿನ ದಿನಗಳು ವಿಶ್ವಾಸದ ದಿನಗಳು.

*ಸೇವಾ ಹಿ ಪರಮೋ ಧರ್ಮಃ*

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆ, ಉಡುಪಿ ಸದಸ್ಯರಿಂದ ಧನಸಹಾಯ




**ಉಡುಪಿ (ಜು. 29) :** ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆ ಉಡುಪಿ ಸದಸ್ಯರಿಂದ ಸಂಗ್ರಹಿತವಾದ ರೂ.1,17,505/– ಧನಸಹಾಯವನ್ನು ಸೇವಾಭಾರತಿಯ ಕಾರ್ಯಾಚಟುವಟಿಕೆಗಳಿಗಾಗಿ ಸೇವಾಭಾರತಿಯ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಇವರಿಗೆ ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಭಾರತ್ ವಿಕಾಸ್ ಪರಿಷದ್‌ನ ಕಾರ್ಯದರ್ಶಿ ಶ್ರೀ ಎಸ್. ಎಸ್. ಶೆಣೈ, ಸಭಾಪತಿಗಳಾದ ಶಾರದಾ ಇಂಟರ್‌ನ್ಯಾಷನಲ್ ಶಾಖೆಯ ನಿರ್ದೇಶಕರಾದ ಶ್ರೀ ವಿದ್ಯಾವಂತ್ ಆಚಾರ್ಯರು ಹಾಗೂ ಸೇವಾಭಾರತಿಯ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಶ್ರೀ ಚರಣ್ ಕುಮಾರ್ ಎಂ. ಹಾಗೂ ಶ್ರೀ ಮನು ಆರ್. ಉಪಸ್ಥಿತರಿದ್ದರು.

ಸೇವಾಭಾರತಿ ಖಜಾಂಚಿ ಶ್ರೀ ಕೆ ವಿನಾಯಕ ರಾವ್ ಜೂನ್ ತಿಂಗಳಿನಲ್ಲಿ ಉಡುಪಿ ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯ ಸದಸ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರವನ್ನು ನಡೆಸಿದ್ದರು. ಈ ಕಾರ್ಯಾಗಾರದ ಮುಖಾಂತರ ಬೆನ್ನುಹುರಿ ಅಪಘಾತದ ಬಗ್ಗೆ ತಿಳಿದುಕೊಂಡ ತಂಡ, ತದ ನಂತರ ಸೇವಾಭಾರತಿ ಸಂಸ್ಥೆಗೆ ಧನಸಹಾಯ ಮಾಡಬೇಕೆಂದು ನಿರ್ಧರಿಸಿ, ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯ ಮುಖ್ಯಸ್ಥರು ಸದಸ್ಯರ ಮನೆಗೆ ಹೋಗಿ, ಬೆನ್ನುಹುರಿ ಅಪಘಾತದ ಬಗ್ಗೆ ತಿಳಿಸಿ, ಸದಸ್ಯರಿಂದ ಧನ ಸಂಗ್ರಹಣೆ ಮಾಡಿದ ಮೊತ್ತವನ್ನು ಜುಲೈ 29 ರಂದು ಹಸ್ತಾಂತರಿಸಿದರು.

**ಸೇವಾಭಾರತಿ ಖಜಾಂಚಿ ಶ್ರೀ ಕೆ ವಿನಾಯಕ ರಾವ್ ಜೂನ್ ತಿಂಗಳಿನಲ್ಲಿ ಉಡುಪಿ ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯ ಸದಸ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರವನ್ನು ನಡೆಸಿದ್ದರು. ಈ ಕಾರ್ಯಾಗಾರದ ಮುಖಾಂತರ ಬೆನ್ನುಹುರಿ ಅಪಘಾತದ ಬಗ್ಗೆ ತಿಳಿದುಕೊಂಡ ತಂಡ, ತದ ನಂತರ ಸೇವಾಭಾರತಿ ಸಂಸ್ಥೆಗೆ ಧನಸಹಾಯ ಮಾಡಬೇಕೆಂದು ನಿರ್ಧರಿಸಿ ಧನ ಸಂಗ್ರಹಿಸಿದರು.**

ಒಟ್ಟು 30 ಮಂದಿ ಸದಸ್ಯರು ಸೇವಾಭಾರತಿ ಸಂಸ್ಥೆಗೆ ಧನಸಹಾಯ ಮಾಡಿದರು.

# ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ



**ಸೌತಡ್ಕ (ಜು.29):** ಸೇವಾಭಾರತಿ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದಂತಹ ಶ್ರೀ ಕೆ.ವಿನಾಯಕ ರಾವ್‌ರವರ ಹುಟ್ಟುಹಬ್ಬದ ಸಂಭ್ರಮಾಚರಣೆಯನ್ನು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಜುಲೈ 29ರಂದು ಆಚರಿಸಲಾಯಿತು. ಕಾರ್ಯಕ್ರಮವನ್ನು ದೀಪಪ್ರಜ್ವಲನೆ ಮುಖಾಂತರ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷರು ರೊ. ಅನಂತಭಟ್ ಮಚ್ಚಿಮಲೆ, ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನ ವ್ಯವಸ್ಥಾಪನ ಸಮಿತಿ ಅಧ್ಯಕ್ಷರು ಶ್ರೀ ಹರೀಶ್ ರಾವ್, ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷರು ಶ್ರೀ ಕೃಷ್ಣ ಭಟ್, ಸೇವಾಭಾರತಿಯ ಸಲಹಾಮಂಡಳಿ ಸದಸ್ಯರು ಡಾ. ಎ.ಜಯಕುಮಾರ ಶೆಟ್ಟಿ, ಅರುಣ್ ಕುಮಾರ್ ಉಜಿರೆ, ಸೇವಾಭಾರತಿ ಅಧ್ಯಕ್ಷರು ಶ್ರೀಮತಿ ಸ್ವರ್ಣಗೌರಿ, ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ಆಗಮಿಸಿ ಶ್ರೀ ಕೆ. ವಿನಾಯಕ ರಾವ್ ಹುಟ್ಟುಹಬ್ಬಕ್ಕೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಬೆಳ್ತಂಗಡಿ ರೋಟರಿಕ್ಲಬ್‌ನ ಸದಸ್ಯರು, ಸೇವಾಭಾರತಿಯ ಹಿತೈಷಿಗಳಾದ ಶ್ರೀಮತಿ ಶಾಂತಕುಮಾರಿ, ಶ್ರೀಮತಿ ಛಾಯಾ ಸಿ.ಎಸ್. ಉಜಿರೆ ಇಮ್ಯಾಕ್ಸ್ ಕಂಪ್ಯೂಟರ್ ಬ್ರಾಂಚ್ ಹೆಡ್ ಶ್ರೀಮತಿ ಜ್ಯೋತಿಲಕ್ಷ್ಮಿ, ಶ್ರೀಮತಿ ಬೇಬಿ ಉಮೇಶ್, ಸೇವಾಭಾರತಿ ಸಿಬ್ಬಂದಿಗಳು ಹಾಗೂ ಸೇವಾಧಾಮದ ಸನಿವಾಸಿ ಮತ್ತು ಅವರ ಆರೈಕೆದಾರರು ಉಪಸ್ಥಿತರಿದ್ದರು.

ಬೆಳ್ತಂಗಡಿ ರೋಟರಿ ಕ್ಲಬ್ ತಂಡವು ಶ್ರೀ ಚಂದಪ್ಪ ಉಳ್ಳಾಲ ಇವರಿಗೆ ಗಾಲಿಕುರ್ಚಿಯನ್ನು ಹಸ್ತಾಂತರಿಸಿ, ಸೇವಾಭಾರತಿ ಕಾರ್ಯ ಚಟುವಟಿಕೆಗಳಿಗೆ ಧನ ಸಹಾಯ ನೀಡಿದರು. ಸೇವಾಭಾರತಿ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದಂತಹ ಶ್ರೀ ಕೆ.ವಿನಾಯಕ ರಾವ್ ರವರ ಹುಟ್ಟುಹಬ್ಬದ ಸಂಭ್ರಮಾಚರಣೆಯ ಪ್ರಯುಕ್ತ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ಉಮೇಶ್ ಸುಳ್ಯ ಇವರಿಗೆ ವಾಟರ್‌ಬೆಡ್ ಹಸ್ತಾಂತರಿಸಿ, ಸೇವಾಧಾಮದ ಎಲ್ಲಾ ಸನಿವಾಸಿ ಗಳಿಗೆ ಕಿಟ್ ಹಾಗೂ ಬೆಡ್‌ಶೀಟ್ ನೀಡಲಾಯಿತು. ಕಾರ್ಯಕ್ರಮದ ನಂತರ ಜೀ ವಾಹಿನಿ ಸರಿಗಮಪ ಹಾಗೂ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಖ್ಯಾತಿಯ ಕು. ಕ್ಷಿತಿ ಕೆ. ರೈ ಧರ್ಮಸ್ಥಳ ಇವರಿಂದ ರಸಮಂಜರಿ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಒಟ್ಟು 30 ಮಂದಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿ ಡಾಕ್ಯುಮೆಂಟ್ಸ್ ಸಂಯೋಜಕಿ ಕು. ಅಪೂರ್ವ ಪಿ.ವಿ. ನಿರೂಪಿಸಿದರು. ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀಮತಿ ಪುಷ್ಪಲತಾ ಸ್ವಾಗತಿಸಿ, ಸೇವಾಭಾರತಿ ಮ್ಯಾನೇಜರ್ ಶ್ರೀಮೋಹನ್ ಎಸ್. ಧನ್ಯವಾದವಿತ್ತರು.

## ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಮತ್ತು ಮಕ್ಕಳ ರಕ್ಷಣಾ ನೀತಿ ಬಗ್ಗೆ ಜಾಗೃತಿ ಕಾರ್ಯಾಗಾರ



**ಸೌತಡ್ಕ :** ಸೇವಾಭಾರತಿ– ಸೇವಾಧಾಮದ ವತಿಯಿಂದ ಸಂಸ್ಥೆಯ ಸಿಬ್ಬಂದಿಗಳಿಗೆ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಮತ್ತು ಮಕ್ಕಳ ರಕ್ಷಣಾ ನೀತಿ ಬಗ್ಗೆ ಜಾಗೃತಿ ಕಾರ್ಯಾಗಾರವನ್ನು ಜುಲೈ 08 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ನಡೆಸಲಾಯಿತು.

ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಸಮಿತಿಯ ಅಧ್ಯಕ್ಷೆ ಶ್ರೀಮತಿ ವಸಂತಿ ಗೌಡ ಲೈಂಗಿಕ ಕಿರುಕುಳ ತಡೆಗಟ್ಟುವಿಕೆಯ ಬಗ್ಗೆ ಮಾಹಿತಿಯನ್ನು ನೀಡಿದರು.ಸೇವಾಭಾರತಿ ಡಾಕ್ಯುಮೆಂಟ್ಸ್ ಸಂಯೋಜಕಿಕು.ಅಪೂರ್ವ ಪಿ.ವಿ. ಮಕ್ಕಳ ರಕ್ಷಣಾ ನೀತಿ ಬಗ್ಗೆ ಮಾಹಿತಿ ಇತ್ತರು. ಒಟ್ಟು 11 ಮಂದಿ ಸಿಬ್ಬಂದಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

## ಉಡುಪಿ ಕುಂಜಿಬೆಟ್ಟು ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ( ಜು.19):** ಸೇವಾಭಾರತಿ –ಸೇವಾಧಾಮದ ವತಿಯಿಂದ ಉಡುಪಿ ಕುಂಜಿಬೆಟ್ಟು ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 19 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು ಆರ್. ಇವರು ಬೆನ್ನುಹುರಿ ಅಪಘಾತಕ್ಕೆ ಕಾರಣಗಳು, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರದ ಶ್ರೀ ರಾಘುನಾಥ್, ಕಾಲೇಜಿನ ನಿರ್ದೇಶಕಿ ಶ್ರೀಮತಿ ನಿರ್ಮಲಾಕುಮಾರಿ, ರಾಷ್ಟ್ರೀಯ ಸೇವಾಯೋಜನೆಯ ಸಂಯೋಜಕರು ಶ್ರೀ ನವೀನ್‌ಚಂದ್ರ, ಶ್ರೀ ರೋಹಿತ್ ಅಮೀನ್, ಶ್ರೀ ಹರೀಶ್ ರವೀಂದ್ರ, ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶ್ರೀ ಶೈಲೇಶ್, ಶ್ರೀಮತಿ ಶ್ರುತಿ, ಸೇವಾಭಾರತಿಯ ಕ್ಷೇತ್ರಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 140 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅಚಲಾ ಸ್ವಾಗತಿಸಿ, ಅಪರ್ಣಲಕ್ಷ್ಮಿ ಧನ್ಯವಾದವಿತ್ತರು.

## ಕೊಡಗು ಜಿಲ್ಲೆ ಸೋಮವಾರಪೇಟೆಯ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ



**ಬೆಳ್ತಂಗಡಿ (ಜು.14):** ಸೇವಾಭಾರತಿ –ಸೇವಾಧಾಮದ ವತಿಯಿಂದ ಸೋಮವಾರಪೇಟೆಯ ಸರಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 14 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು. ಆರ್. ಇವರು ಬೆನ್ನುಹುರಿ ಅಪಘಾತ ಅದರ ನಿರ್ವಹಣಾಕ್ರಮ ಮತ್ತು ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕವೃಂದ ಉಪಸ್ಥಿತರಿದ್ದರು.

ಒಟ್ಟು 120 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೊಡಗು ಜಿಲ್ಲೆ ಸೋಮವಾರಪೇಟೆಯ ಕುವೆಂಪು ವಿಶ್ವಮಾನವ ಶಾಲೆ ಮತ್ತು ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಬೆಳ್ತಂಗಡಿ (ಜು.14):** ಸೇವಾಭಾರತಿ –ಸೇವಾಧಾಮದ ವತಿಯಿಂದ ಸೋಮವಾರಪೇಟೆಯ ಕುವೆಂಪು ವಿಶ್ವಮಾನವ ಶಾಲಾ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 14 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು.ಆರ್. ಇವರು ಬೆನ್ನುಹುರಿ ಅಪಘಾತ ಅದರ ನಿರ್ವಹಣಾ ಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು . ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲಕಿ ಮೆರ್ಲಿನ್ ಹಾಗೂ ಅಧ್ಯಾಪಕವೃಂದ ಉಪಸ್ಥಿತರಿದ್ದರು.

ಒಟ್ಟು 180 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದದ್ದರು. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲಕಿ ಮೆರ್ಲಿನ್ ನಿರೂಪಿಸಿ, ಸ್ವಾಗತಿಸಿ ಧನ್ಯವಾದವಿತ್ತರು.

## ಜುಲೈ ತಿಂಗಳಲ್ಲಿ ದೇಣಿಗೆ ನೀಡಿದ ಸಂಘಸಂಸ್ಥೆಗಳು

ಇಂಪಾಕ್ಟ್ ಫೌಂಡೇಶನ್(ಇಂಡಿಯ), ಮುಂಬೈ
ಅಸೋಸಿಯೇಷನ್ ಆಫ್ ಪೀಪಲ್ಸ್ ವಿತ್ ಡಿಸೆಬಿಲಿಟಿ (ಎಪಿಡಿ) ಬೆಂಗಳೂರು
ರೋಟರಿ ಕ್ಲಬ್ ಬೆಳ್ತಂಗಡಿ

## ಮಹನೀಯ ದಾನಿಗಳು

ಕು. ಅರ್ಪಣ ಹರಿಹರನ್, ಚೆನ್ನೈ
ಕು. ರಂಜಿತಾ ರಾವ್. ಕೆ, ದುಬೈ
ಶ್ರೀ ಶಂಕರ್‌ಗೌಡ ಎಂ. ಪಾಟೀಲ್, ಬಾಗಲಕೋಟೆ
ಶ್ರೀ ಸುಬ್ರಾಯ ನಂದೋಡಿ, ಕಾಸರಗೋಡು
ಶ್ರೀಮತಿ ಬಿ. ಸ್ವರ್ಣವಲ್ಲಿ ಉಡುಪ, ಉಡುಪಿ
ಶ್ರೀ ಕೆ.ವಿವೇಕ್ ರಾವ್, ಬೆಂಗಳೂರು
ಶ್ರೀ ಅಕ್ಷಯ ಪಾಟಾಲಿ, ಬಡಗನ್ನೂರು
ಶ್ರೀ ಆಶ್ರಿತ್ ಸಿ.ಪಿ., ಉಜಿರೆ
ಶ್ರೀ ಭಾರ್ಗವ ರಾಮಬ್ರಹ್ಮ ಕೆ.ಎಲ್., ಬೆಂಗಳೂರು
ಶ್ರೀ ಕೆ.ಎಲ್. ಗೋಪಾಲಕೃಷ್ಣ, ಬೆಂಗಳೂರು
ಕು. ಶ್ವೇತಾ ಜಿ. ಪೈ, ಬೆಂಗಳೂರು
ಡಾ. ಎ. ಜಯಕುಮಾರ ಶೆಟ್ಟಿ, ಉಜಿರೆ
ಶ್ರೀ ರಾಜೇಶ್, ಉಡುಪಿ
ಶ್ರೀ ಪಿ.ವಸಂತ ಭಟ್, ಉಡುಪಿ
ಶ್ರೀ ಬಿ. ಕೃಷ್ಣ ಕಾಮತ್, ಉಡುಪಿ
ಶ್ರೀ ಪಿ. ಭಾಸ್ಕರ್ ಕಾಮತ್, ಉಡುಪಿ
ಶ್ರೀ ಎಚ್. ಹರಿರಾಮ್ ಶೆಣೈ, ಉಡುಪಿ
ಶ್ರೀ ಎಸ್. ಹರಿದಾಸ್ ನಾಯಕ್, ಉಡುಪಿ
ಶ್ರೀ ಎಸ್ ಸುಬ್ರಾಯ ಶೆಣೈ, ಉಡುಪಿ
ಶ್ರೀ ಕೃಷ್ಣ ದಾಸ್ ಸಿ.ಪಿ., ಉಡುಪಿ
ಶ್ರೀ ಮೋಹನ್ ಶಾನುಭೋಗ್, ಉಡುಪಿ
ಶ್ರೀ ಯು. ರತ್ನಾಕರ ದೇವಾಡಿಗ, ಉಡುಪಿ
ಶ್ರೀ ಎ. ಸತೀಶ್ ನಾಯಕ್, ಉಡುಪಿ
ಶ್ರೀ ಎನ್.ವಿ. ವೆಂಕಟೇಶ್, ಉಡುಪಿ
ಶ್ರೀ ಎಂ. ವಿಶ್ವನಾಥ ಭಟ್, ಮಣಿಪಾಲ
ಶ್ರೀ ವಿ. ಸದಾನಂದ ಶಾನುಭೋಗ್, ಉಡುಪಿ
ಶ್ರೀ ಎಂ. ಪ್ರಭಾಕರ ಹೆಗ್ಡೆ, ಉಡುಪಿ
ಡಾ. ಅಜಯ್ ಉದ್ಯಾವರ್, ಉಡುಪಿ
ಶ್ರೀ ಪ್ರಕಾಶ್ ಗಡಿಯಾರ್, ಉಡುಪಿ
ಶ್ರೀ ಎಚ್. ದೇವದಾಸ್ ಪೈ, ಉಡುಪಿ
ಶ್ರೀ ಮಲ್ಪೆ ವಲ್ಲಭ ಭಟ್, ಉಡುಪಿ
ಶ್ರೀ ಎಂ. ಚಿತ್ತರಂಜನ್ ಭಟ್, ಉಡುಪಿ
ಶ್ರೀ ಬಿ. ಜನಾರ್ಧನ ಭಟ್, ಉಡುಪಿ
ಶ್ರೀ ಎಂ. ವೆಂಕಟೇಶ್ ಮೆಹೆಂದಲೆ, ಉಡುಪಿ
ಶ್ರೀ ಪಿ. ಭಾಸ್ಕರ ತಂತ್ರಿ, ಉಡುಪಿ
ಶ್ರೀ ವಿದ್ಯಾವಂತ ಆಚಾರ್ಯ, ಉದ್ಯಾವರ
ಶ್ರೀ ಐ.ಎಸ್.ಎಂ. ಶರ್ಮ, ಉಡುಪಿ
ಶ್ರೀ ಕೆ. ರಘುಪತಿ ಉಪಾಧ್ಯಾಯ, ಉಡುಪಿ
ಶ್ರೀ ಎಸ್.ಎಂ. ನಾಯಕ್, ಉಡುಪಿ
ಶ್ರೀ ಕೆ. ಸುಂದರ ಶೆಟ್ಟಿ, ಉಡುಪಿ
ಶ್ರೀ ಗೋಪಾಲ ಪೂಜಾರಿ, ಉಡುಪಿ
ಶ್ರೀ ಯ.ಕೆ. ಪ್ರಸಾದ್, ಕಾಸರಗೋಡು
ಶ್ರೀ ನಾರಾಯಣಮೂರ್ತಿ, ಮಂಗಳೂರು
ಶ್ರೀ ಕೆ. ಕಮಲಾಕ್ಷ ರಾವ್, ಮಣಿಪಾಲ

## ಸೇವಾನಿಧಿ ದಾನಿಗಳು

ವೆಲ್‌ವೆಟ್ ಟ್ರಾವೆಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ಮಧುಸೂದನ್, ಉಜಿರೆ
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಛಾಯಾ ಸಿ.ಎಸ್, ಉಜಿರೆ
ಶ್ರೀ ಮಧ್ವಮೂರ್ತಿ ಪಿ, ಉಡುಪಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ಶಾಂತಕುಮಾರಿ, ಉಜಿರೆ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಮಧುಸೂದನ್, ಉಜಿರೆ
ಡಾ. ರಾಮಕೃಷ್ಣ ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್ ಕೆ., ಕನ್ಯಾಡಿ
ಶ್ರೀ ಕೆ. ಕಾರ್ತಿಕ್, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ರಜತ್ ಕುಮಾರ್. ಜೆ, ವೇಣೂರು
ಶ್ರೀ ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಶ್ರೀಧರ್ ಕೆ.ವಿ., ಉಜಿರೆ
ಶ್ರೀ ಪುರಂದರ, ನಾರ್ಯ

## ವಸ್ತುರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಶ್ರೀ ವೇಣುಗೋಪಾಲ್, ಬೆಂಗಳೂರು
ಅಮೃತ ಶಿಶುನಿವಾಸ, ಬೆಂಗಳೂರು
ಉಪ್ಪಿನಂಗಡಿ ಹವ್ಯಕಮಂಡಲ, ಉಪ್ಪಿನಂಗಡಿ

## ಜುಲೈ ತಿಂಗಳಲ್ಲಿ ವಾಕರ್ ವಿತರಣೆ



ಶ್ರೀ ವೀರೇಂದ್ರ
ಬಂಟ್ವಾಳ



ಶ್ರೀ ಗಣೇಶ್ ಎಂ. ಎ.
ಸಕಲೇಶಪುರ

## ಸಂಪನ್ನಗೊಂಡ 25 ನೇ ಮಹಿಳೆಯರಿಗಾಗಿನ

# ಉಚಿತ ಟೈಲರಿಂಗ್ ತರಬೇತಿ



ಕನ್ಯಾಡಿ (ಜು.26): ಸೇವಾಭಾರತಿ ಕನ್ಯಾಡಿ ಹಾಗೂ ಶ್ರೀ ದುರ್ಗಾ ಮಾತೃಮಂಡಳಿ ಕನ್ಯಾಡಿ ಇವುಗಳ ಸಹಯೋಗದಲ್ಲಿ ನಡೆದ ಮಹಿಳೆಯರಿಗಾಗಿನ 25ನೇ ಉಚಿತ ಟೈಲರಿಂಗ್ ತರಬೇತಿಯ ಸಮಾರೋಪ ಸಮಾರಂಭವು ಜುಲೈ 26 ರಂದು ಸೇವಾನಿಕೇತನ ಕಾರ್ಯಾಲಯದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಸುಮತಿ ತರಬೇತಿಯಲ್ಲಿ ತಿಳಿಸಿಕೊಟ್ಟ ಹೊಲಿಗೆಯ ವಿಧಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ, ತಮಗೆ ಶಿಬಿರಾರ್ಥಿಗಳಿಂದ ಕಲಿಯುವ ಸಂದರ್ಭದಲ್ಲಿ ಉತ್ತಮ ಪ್ರತಿಕ್ರಿಯೆ ದೊರಕುತಿತ್ತು ಎಂದು ಸಂತಸ ವ್ಯಕ್ತಪಡಿಸಿದರು.


ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಇಂಡಿಯನ್ ಬ್ಯಾಂಕ್ ಧರ್ಮಸ್ಥಳ ಶಾಖೆಯ ಮ್ಯಾನೇಜರ್ ಶ್ರೀನಿವಾಸ. ಮಹಿಳಾ ಸಬಲೀಕರಣದ ಮಹತ್ವ ತಿಳಿಸಿ ಶಿಬಿರಾರ್ಥಿಗಳಿಗೆ ಸ್ವಉದ್ಯೋಗಕ್ಕೆ ಸಾಲಸೌಲಭ್ಯಗಳನ್ನು ಬ್ಯಾಂಕಿನಿಂದ ನೀಡಲಾಗುವುದು ಎಂದು ತಿಳಿಸಿದರು. ಸೇವಾಭಾರತಿಯ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಮಹಿಳೆಯರು ತಮ್ಮ ತಮ್ಮ ಬಟ್ಟೆಗಳನ್ನಾದರೂ ಹೊಲಿಯುವಷ್ಟು ಸ್ವತಂತ್ರರಾಗಬೇಕು ಎಂದು ತಿಳಿಸಿ ಕಾರ್ಯಕ್ರಮಕ್ಕೆ ಶುಭ ನುಡಿದರು. ಶ್ರೀ ದುರ್ಗಾ ಮಾತೃಮಂಡಳಿಯ ಅಧ್ಯಕ್ಷೆ ಶ್ರೀಮತಿ ಶಾಂತ ಪಿ.ಶೆಟ್ಟಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೊಲ್ಲಿ ದುರ್ಗಾಪರಮೇಶ್ವರಿ ದೇವಸ್ಥಾನ ಸಮಿತಿಯ ಮಹಿಳಾ ಅಧ್ಯಕ್ಷೆ ಹಾಗೂ ಉಜಿರೆ ಇ–ಮ್ಯಾಕ್ಸ್ ಕಂಪ್ಯೂಟರ್ ಟ್ರೈನಿಂಗ್ ಸೆಂಟರ್‌ನ ಬ್ರಾಂಚ್ ಹೆಡ್ ಶ್ರೀಮತಿ ಜ್ಯೋತಿಲಕ್ಷ್ಮಿ ಮಹಿಳೆಯರ ಆರ್ಥಿಕ, ಸಾಮಾಜಿಕ ಬೆಳವಣಿಗೆ ಅತ್ಯವಶ್ಯಕ ಎಂದು ತಿಳಿಸಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಸುಮತಿ, ಸೇವಾಭಾರತಿ ಯಿಂದ ಟೈಲರಿಂಗ್ ತರಬೇತಿ ಪಡೆದು ಪ್ರಸ್ತುತ ಟೈಲರಿಂಗ್‌ನ್ನು ಸ್ವಉದ್ಯೋಗವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ರಶ್ಮಿ ಹಾಗೂ ಜಯಂತಿ ಅವರನ್ನು ಸೇವಾಭಾರತಿ ಹಾಗೂ ಶ್ರೀದುರ್ಗಾ ಮಾತೃಮಂಡಳಿ ಪರವಾಗಿ ಗೌರವಿಸಲಾಯಿತು. ನಂತರ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಒಟ್ಟು 30 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿ ಡಾಕ್ಯುಮೆಂಟ್ ಸಂಯೋಜಕಿ ಅಪೂರ್ವ ಪಿ.ವಿ. ನಿರೂಪಿಸಿ, ಅಕೌಂಟೆಂಟ್ ಕು. ಅಕ್ಷತಾ ಸ್ವಾಗತಿಸಿ, ಧನ್ಯವಾದವಿತ್ತರು.

# ಸೇವಾ ಸಂಗಮ

## ಆನ್‌ಲೈನ್ ಕಾರ್ಯಗಾರ



ಜುಲೈ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರ ದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮೂಡಿಗೆರೆ ಡಾ. ದಯಾಕರ್ ಹಾಸ್ಪಿಟಲ್‌ನ ಡಾ. ಹೇಮಂತ್ ನಾಯ್ಕ್ ಎಂ.ಬಿ.ಬಿ.ಎಸ್, ಡಿ.ಎಫ್.ಎಂ, ಡಿ.ಎಫ್.ಒ, ಎಂ.ಎಫ್. ಎಫ್.ಎಸ್.ಸಿ (ಲಂಡನ್), ಎಫ್.ಪಿ.ಸಿ (ಪಿ. ಎಚ್.ಡಿ ) ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕರಳು ಮತ್ತು ಮೂತ್ರಕೋಶ ನಿರ್ವಹಣೆಯ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 62 ಮಂದಿ ಭಾಗವಹಿಸಿದ್ದರು.

## ಜುಲೈ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 8 |
| 2. | ವಾಕರ್ ವಿತರಣೆ | – 3 |
| 3. | ಸೆಲ್ಫ್‌ಕೇರ್ ಕಿಟ್ | – 13 |
| 4. | ವೈದ್ಯಕೀಯ ತಪಾಸಣೆ | – 2 |
| 5. | ಎಲ್ಬೋ ಸ್ಟಿಕ್ | – 1 |

## ತೆಂಕನಿಡಿಯೂರು ಸರಕಾರಿ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ (ಜು.19):** ಸೇವಾಭಾರತಿ – ಸೇವಾಧಾಮದ ವತಿಯಿಂದ ತೆಂಕನಿಡಿಯೂರು ಸರಕಾರಿ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 19 ರಂದು ಆಯೋಜಿಸಲಾಯಿತು. ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು.ಆರ್. ಇವರು ಬೆನ್ನುಹುರಿ ಅಪಘಾತಕ್ಕೆ ಕಾರಣಗಳು, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ, ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಿಶ್ವನಾಥ್, ಸೇವಾಭಾರತಿ ಕ್ಷೇತ್ರಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 56 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ರೀನಾ ಸ್ವಾಗತಿಸಿದರು.

## ಉಡುಪಿ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ




**ಉಡುಪಿ (ಜು.19):** ಸೇವಾಭಾರತಿ –ಸೇವಾಧಾಮದ ವತಿಯಿಂದ ಉಡುಪಿ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 19 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು.ಆರ್. ಇವರು ಬೆನ್ನುಹುರಿ ಅಪಘಾತಕ್ಕೆ ಕಾರಣಗಳು, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಲೀಲಾವತಿ ಭಟ್, ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಮಂಜುಳಾ, ಕಾಲೇಜಿನ ಅಧ್ಯಾಪಕರಾದ ಶ್ರೀ ಪರಮೇಶ್ವರ್, ಶ್ರೀಮತಿ ಜ್ಯೋತಿಲಕ್ಷ್ಮಿ, ಶ್ರೀಮತಿ ವಂದಿತಾ, ಸೇವಾಭಾರತಿ ಕ್ಷೇತ್ರ ಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 84 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಲೀಲಾಬಾಯಿ ಭಟ್ಟ ಸ್ವಾಗತಿಸಿ, ರೆಡ್‌ಕ್ರಾಸ್ ಸ್ಸಂಸ್ಥೆಯ ಸಂಯೋಜಕರಾದ ಪ್ರಭಾಕರ ಮಹಾಬಲ ಶೆಟ್ಟಿ ಧನ್ಯವಾದವಿತ್ತರು.

## ಉಡುಪಿ ಶಿವರಾಮ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ(ಜು.20):** ಸೇವಾಭಾರತಿ –ಸೇವಾಧಾಮದ ವತಿಯಿಂದ ಉಡುಪಿ ಮೂಡುಪೆರಂಪಳ್ಳಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 20 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು.ಆರ್. ಇವರು ಬೆನ್ನುಹುರಿ ಅಪಘಾತ, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶ್ರೀನಾಥ ನಾಯಕ್, ಕಾಲೇಜು ಪ್ರಾಧ್ಯಾಪಕರಾದ ಶ್ರೀ ಗೋಪಾಲ್, ಶ್ರೀಮತಿ ಲಾವಣ್ಯ, ರಾಷ್ಟ್ರೀಯ ಸೇವಾಯೋಜನೆಯ ಸಂಯೋಜಕರಾದ ಶ್ರೀಶಂಕರ್, ಶ್ರೀಮತಿಅಮಿತಾ, ಕಾಲೇಜಿನ ವಿಭಾಗ ಮುಖ್ಯಸ್ಥರಾದ ಶ್ರೀಮತಿ ಶುಭಲತಾ, ಶ್ರೀಮತಿ ಕೃತಿಕಾ, ಶ್ರೀಮತಿ ಸ್ವಪ್ನ, ಶ್ರೀ ಶರತ್, ಸೇವಾಭಾರತಿಯ ಕ್ಷೇತ್ರ ಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು. ಒಟ್ಟು 61 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಉಡುಪಿ ಮಿಲಾಗ್ರಿಸ್ ಪದವಿಪೂರ್ವ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ (ಜು.20):** ಸೇವಾಭಾರತಿ –ಸೇವಾಧಾಮದ ವತಿಯಿಂದ ಉಡುಪಿ ಕಲ್ಯಾಣಪುರ ಮಿಲಾಗ್ರಿಸ್ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 20 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು ಆರ್. ಇವರು ಬೆನ್ನುಹುರಿ ಅಪಘಾತ, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸವಿತಾಕುಮಾರಿ, ವಿಜ್ಞಾನ ಮತ್ತು ಇಕೋಕ್ಲಬ್ನ ಸಂಯೋಜಕಿ ಶ್ರೀಮತಿ ಪ್ರೀತಿ, ಕಾಲೇಜಿನ ಅಧ್ಯಾಪಕರಾದ ಶ್ರೀಮತಿ ದೀಪ, ಶ್ರೀ ಅಖಿಲ್, ಶ್ರೀಲೊಯಸ್ಟನ್, ಶ್ರೀಮತಿ ಲೋಯ್ಲಿಸ್, ಶ್ರೀಮತಿ ಲೋಯ್ಲಿಟಾ, ಶ್ರೀಮತಿ ರುಬೇಕಾ, ಸೇವಾಭಾರತಿಯ ಕ್ಷೇತ್ರ ಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 180 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದದ್ದರು. ನೋಹಸಲ್ದಾನ ಕಾರ್ಯಕ್ರಮಕ್ಕೆ ಧನ್ಯವಾದವಿತ್ತರು

# ಗಾಲಿಕುರ್ಚಿ ವಿತರಣೆ







ಶ್ರೀಮತಿ ಉಷಾ ಸುರೇಶ್, ವಿರಾಜ್‌ಪೇಟೆ । ಶ್ರೀ ರವಿ ಜನ್ನಾಪುರ









ಶ್ರೀ ಗಿರೀಶ್ ನಾಯ್ಕ್, ಚಿಕ್ಕಂಗಳ । ಶ್ರೀಮತಿ ಪ್ರಮೀಳಾ, ಕುಶಾಲನಗರ









ಶ್ರೀ ಸೈಫುದ್ದಿನ್ ಜಂಬೂರ್, ಮಾದಾಪುರ । ಶ್ರೀ ರಂಜಿತ್, ಆಲ್ದೂರ್







ಶ್ರೀ ಹಮೀದ ಜಂಬೂರ್, ಮಾದಾಪುರ । ಶ್ರೀ ವಿನಯ್ ಕುಮಾರ್, ಕಡೂರು

## ಉಡುಪಿ ಎಂ.ಜಿ.ಎಂಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ( ಜು.21):** ಸೇವಾಭಾರತಿ –ಸೇವಾಧಾಮದ ವತಿಯಿಂದ ಉಡುಪಿ ಕುಂಜಿಬೆಟ್ಟು ಎಂ. ಜಿ.ಎಂ. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 21 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರಸಂಯೋಜಕರಾದ ಮನು.ಆರ್. ಇವರು ಬೆನ್ನುಹುರಿ ಅಪಘಾತ, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಮಾಲತಿ ದೇವಿ, ಅಧ್ಯಾಪಕರು ಶ್ರೀಮತಿ ಕಲ್ಪನಾ, ಸೇವಾಭಾರತಿಯ ಕ್ಷೇತ್ರಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 90 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಮಾಲತಿದೇವಿ ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

## ಮಲ್ಪೆ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ (ಜು.21):** ಸೇವಾಭಾರತಿ –ಸೇವಾಧಾಮದ ವತಿಯಿಂದ ಮಲ್ಪೆ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ವನ್ನು ಜುಲೈ 21 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರಸಂಯೋಜಕರಾದ ಮನು ಆರ್. ಇವರು ಬೆನ್ನುಹುರಿ ಅಪಘಾತ, ಅದರ ನಿರ್ವಹಣಾಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವರ್ಗಿಸ್, ಅಧ್ಯಾಪಕರು ಶ್ರೀ ಚಂದ್ರಶೇಖರ್, ಶ್ರೀ ಲಕ್ಷ್ಮಣ್, ಶ್ರೀಮತಿ ಹೇಮಲತಾ, ಶ್ರೀಮತಿ ಪೂರ್ಣಿಮಾ, ಸೇವಾಭಾರತಿಯ ಕ್ಷೇತ್ರಸಂಯೋಜಕರು ಶ್ರೀ ಶಶಾಂತ್ ಉಪಸ್ಥಿತರಿದ್ದರು.

ಒಟ್ಟು 95 ಮಂದಿ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕುಮಾರಿ ಜಯಶ್ರೀ ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

## ಶೃಂಗೇರಿಯಲ್ಲಿ ಆಶಾಕಾರ್ಯಕರ್ತೆಯರು ಮತ್ತು ಧನ್ವಂತರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ (ಜು.25):** ಸೇವಾಭಾರತಿ –ಸೇವಾಧಾಮದ ವತಿಯಿಂದ ಶೃಂಗೇರಿಯಲ್ಲಿ ಆಶಾಕಾರ್ಯಕರ್ತೆಯರು ಮತ್ತು ಧನ್ವಂತರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಜುಲೈ 25 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಕ್ಷೇತ್ರಸಂಯೋಜಕರಾದ ಮನು. ಆರ್. ಇವರು ಬೆನ್ನುಹುರಿ ಅಪಘಾತ, ಹಾಗೂ ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಶೃಂಗೇರಿಯ ತಾಲೂಕು ವೈದ್ಯಾಧಿಕಾರಿಗಳಾದ ಡಾ. ದಯಾನಂದ ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಧಿಕಾರಿ ಡಾ. ಶ್ರೀನಿವಾಸ್ ಉಪಸ್ಥಿತರಿದ್ದರು. ಒಟ್ಟು 135 ಮಂದಿ ಜಾಗೃತಿ ಕಾರ್ಯಾಗಾರದಲ್ಲಿ ಭಾಗ ವಹಿಸಿದ್ದರು



## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಉಮಾಕಾಂತ್ ಎನ್.ಡಿ.,
ಬೆಂಗಳೂರು



ಶ್ರೀ ಪಾಯಪ್ಪ ದೇವೇಂದ್ರ
ಹಚ್ಚಂಬಲಿ, ಬೆಳಗಾವಿ



ದಿವಂಗತ ಸುಧಾಕರ್ ರಾವ್
ದುಬೈ



ಡಾ. ಹೇಮಂತ್ ನಾಯ್ಕ್
ಮೂಡಿಗೆರೆ



ಶ್ರೀಮತಿ ಶಾಂತಕುಮಾರಿ
ಉಜಿರೆ



ಶ್ರೀ ಉದಯಶಂಕರ್ ಕೆ.
ಶಿಶಿಲ



ಶ್ರೀ ಅಕ್ಷಯ ಪಾಟಾಳಿ,
ಬಡಗನ್ನೂರು



ಮಾಸ್ಟರ್ ವಿಧಿತ್ ಅತ್ರೇಯ
ಉಜಿರೆ




ಶ್ರೀ ಕೆ. ವಿವೇಕ್ ರಾವ್,
ಬೆಂಗಳೂರು



ಶ್ರೀ ಸಚಿನ್ ಕುಮಾರ್,
ಪುತ್ತೂರು







ಶ್ರೀ ಕೆ. ವಿನಾಯಕ ರಾವ್
ಕನ್ಯಾಡಿ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಮಾನ್ಯರೇ,

ನಾನು 13/10/2022 ರಂದು ಅಪಘಾತದಲ್ಲಿ ಬಿದ್ದು Spinal Cord Injury ಆಗಿ ಎ.ಜೆ.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು, 6 ತಿಂಗಳ ನಂತರ ಸೇವಾಧಾಮಕ್ಕೆ ಬಂದು ಸೇರಿರುತ್ತೇನೆ. ಇಲ್ಲಿ ಬಂದ ನಂತರ ಆರೋಗ್ಯದಲ್ಲಿ ಹಲವಾರು ಬದಲಾವಣೆ ಕಂಡುಬಂದಿರುತ್ತದೆ. ಬರುವಾಗ ನನಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ, ಇಲ್ಲಿಗೆ ಬಂದ ನಂತರ ಚಿಕಿತ್ಸೆ ಪಡೆದುಕೊಂಡು ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ. ಯಾರ ಸಹಾಯ ಇಲ್ಲದೆ ನಾನೇ ನಡೆದುಕೊಂಡು ಹೋಗುತ್ತಿದ್ದೇನೆ. ಇಲ್ಲಿ ನನ್ನನ್ನು ಎಲ್ಲಾ ರೀತಿಯಿಂದಲೂ ಅತ್ಯಂತ ಒಳ್ಳೆಯ ರೀತಿಯಲ್ಲಿ ನೋಡಿಕೊಂಡ ಸೇವಾಧಾಮದ ಎಲ್ಲಾ ಸದಸ್ಯರು, ಅಧ್ಯಕ್ಷರು ಮತ್ತು ಎಲ್ಲಾ ವರ್ಗದವರಿಗೂ ನನ್ನ ಧನ್ಯವಾದವನ್ನು ಸಲ್ಲಿಸುತ್ತೇನೆ

ಧನ್ಯವಾದಗಳೊಂದಿಗೆ,

**– ಗಂಗಾಧರ ಶೆಟ್ಟಿಗಾರ್**
ಪಾಣೆಮಂಗಳೂರು

*I choose not to place 'DIS', in my ability*

## ನಿಮಗಿದು ತಿಳಿದಿರಲಿ

**ಬೆನ್ನುಹುರಿ ಅಪಘಾತದ ವ್ಯಕ್ತಿಗಳು ಮತ್ತು ಪೋಷಕರು ಗಮನಿಸಬೇಕಾದ ವಿಷಯಗಳು :**

- ವೈದ್ಯರ ಸಲಹೆಗಳನ್ನು ತಪ್ಪದೆ ಅನುಸರಿಸಿರಿ
- ಮೂಢನಂಬಿಕೆಗಳಿಂದ ಮತ್ತು ನಾಟಿಔಷಧಿಗಳನ್ನು ಬಳಸದಿರಿ ಮತ್ತು ದೂರವಿರಿ.
- ಒತ್ತಡಗಾಯ ಮತ್ತು ಮೂತ್ರದ ಸೋಂಕಿನ ಬಗ್ಗೆ ಎಚ್ಚರವಹಿಸಿ. ದೈಹಿಕ ವ್ಯಾಯಾಮವನ್ನು ತಪ್ಪದೇ ಮಾಡಿ
- ವೈದ್ಯಕೀಯ ಚಿಕಿತ್ಸೆಯ ನಂತರ ಸಾಮಾಜಿಕ ಪುನಃಶ್ಚೇತನ ಪಡೆಯಿರಿ. ಸಂಘಟನೆಯಲ್ಲಿ ನೋಂದಣಿ ಪಡೆದು ಮಾಹಿತಿ ಪಡೆದುಕೊಳ್ಳಿ
- ಬೆನ್ನುಹುರಿ ಅಪಘಾತದ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿ ಸಂಗ್ರಹಿಸಿರಿ.
- ಬೆನ್ನುಹುರಿ ಅಪಘಾತವಾಗದಂತೆ ಎಚ್ಚರವಹಿಸಿ ಹಾಗೂ ಇತರರಿಗೂ ತಿಳಿಸಿರಿ.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಉದ್ಯೋಗಕ್ಕೆ ಮತ್ತೆ ಕೈಹಿಡಿದ ಗೇರುಬೀಜ ಕಾರ್ಖಾನೆ

## ಬೆನ್ನುಹುರಿ ಅಪಘಾತಕ್ಕೊಳಗಾದ ಉಡುಪಿಯ ಸುಮತಿ ನಾಯ್ಕ್‌ರವರ ಯಶೋಗಾಥೆ

ಮನುಷ್ಯನು ವೈದ್ಯರನ್ನು "ವೈದ್ಯೋ ನಾರಾಯಣೋ ಹರಿಃ" ಎಂದು ಹೇಳುತ್ತಾನೆ. ಏಕೆಂದರೆ ಮನುಷ್ಯನ ಜೀವನವನ್ನು ರಕ್ಷಿಸಿ ಅವನಿಗೆ ಪುನರ್ಜನ್ಮ ನೀಡುವಂತ ಪುಣ್ಯದ ಕಾರ್ಯವು ವೈದ್ಯನದ್ದಾಗಿರುತ್ತದೆ. ಆದರೆ ಕೆಲವು ವೈದ್ಯರ ಅಸಡ್ಡೆ ಹಾಗೂ ನಿರ್ಲಕ್ಷ್ಯದಿಂದ ಕೆಲವೊಂದು ಬಾರಿ ದುರ್ಘಟನೆಗಳು ಸಂಭವಿಸುತ್ತದೆ. ಹೀಗೆ ಸರಕಾರಿ ಆಸ್ಪತ್ರೆಯ ವೈದ್ಯನ ನಿರ್ಲಕ್ಷ್ಯದಿಂದಾಗಿ ಮಗುವಿನ ಜನನ ಸಮಯದಲ್ಲಿ ಸಮಸ್ಯೆ ಉಂಟಾಗಿ ಬೆನ್ನುಹುರಿ ಅಪಘಾತಕ್ಕೊಳಗಾದ ಮಹಿಳೆ ಸುಮತಿನಾಯ್ಕ್ ಯಶೋಗಾಥೆ ನಿಮ್ಮ ಮುಂದೆ.

ಸುಮತಿ ನಾಯ್ಕ್‌ರವರು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಪೇತ್ರಿ ಗ್ರಾಮದಲ್ಲಿ 1982 ರಲ್ಲಿ ಜನಿಸಿದರು. ಸರಕಾರಿ ಶಾಲೆಯಲ್ಲಿ ತಮ್ಮ ಎಸ್. ಎಸ್. ಎಲ್. ಸಿ. ಶಿಕ್ಷಣವನ್ನು ಪೂರ್ಣಗೊಳಿಸಿದರು. ತಮ್ಮ ಶಿಕ್ಷಣದ ನಂತರ ಗೇರುಬೀಜ ಕಾರ್ಖಾನೆಯಲ್ಲಿ ತಮ್ಮ ವೃತ್ತಿಜೀವನ ಸಾಗಿಸುತ್ತಾ ತಮ್ಮ ಜೀವನ ನಡೆಸುತ್ತಿದ್ದರು.

ಹೀಗೆ ತಮ್ಮ 34ನೇ ವಯಸ್ಸಿನಲ್ಲಿ ವೈವಾಹಿಕ ಜೀವನ ಪ್ರಾರಂಭಿಸಿದರು. ವಿವಾಹವಾದ 1 ವರ್ಷದ ಬಳಿಕ ತಮ್ಮ 36 ನೇ ವಯಸ್ಸಿನಲ್ಲಿ ಗರ್ಭಿಣಿಯಾದರು. ಆದರೆ ಇವರ ದುರದೃಷ್ಟವಷಾತ್ ಮಗುವಿನ ಜನನ ಸಂದರ್ಭದಲ್ಲಿ ವೈದ್ಯರ ನಿರ್ಲಕ್ಷ್ಯದಿಂದಾಗಿ ತಾಯಿಗೆ ಶಸ್ತ್ರಚಿಕಿತ್ಸೆಯ ಮುಖಾಂತರ ಮಗುವಿನ ಜನನ ಮಾಡಿಸುವ ಬದಲಾಗಿ ತಾಯಿಗೆ ಸಹಜ ಜನನ ಮಾಡಲು ಪ್ರಯತ್ನಸಿದರು. ಇದರಿಂದ ಜನನ ಸಮಯದಲ್ಲಿ ತಾಯಿಯ ಬೆನ್ನಿನ L2– L3 ಭಾಗಕ್ಕೆ ತೊಂದರೆಯಾಗಿ ಬೆನ್ನುಹುರಿ ಅಪಘಾತಕ್ಕೊಳಗಾದರು. ವೈದ್ಯರು ಈ ವಿಷಯ ತಿಳಿಸದೆ ಆರೋಗ್ಯದಲ್ಲಿ ಚೇತರಿಕೆಯಾಗುತ್ತದೆ ಎಂದು ಭರವಸೆ ನೀಡಿದರು. ಮಗುವಿನ ಜನನವಾದ 15 ದಿನಗಳ ಬಳಿಕ ಆರೋಗ್ಯದಲ್ಲಿ ಚೇತರಿಕೆ ಇಲ್ಲದ ಕಾರಣ ಕೆ.ಎಂ.ಸಿ. ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದರು. ಈ ಸಂದರ್ಭದಲ್ಲಿ ಇವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ತಿಳಿಯಿತು. ತದ ನಂತರ ಚಿಕಿತ್ಸೆ ಪಡೆದು ಮನೆಗೆ ತೆರಳಿದರು. 3–4 ತಿಂಗಳ ಬಳಿಕವೂ ಕಾಲಿನ ಭಾಗಗಳಲ್ಲಿ ಚಲನೆ ಇಲ್ಲದಂತಾದಾಗ ಜೀವನದಲ್ಲಿ ಭರವಸೆ ಕಳೆದುಕೊಂಡು ಕಾಲ ಕಳೆಯುತ್ತಿದ್ದರು.

ಇಂತಹ ಸಂದರ್ಭದಲ್ಲಿ ಸೇವಾಭಾರತಿಯು ಕ್ಷೇತ್ರ ಸಂಯೋಜಕರಾದ ಶ್ರೀ ಮನುರವರು ಮನೆಗೆ ಭೇಟಿ ನೀಡಿ ಪುನಶ್ಚೇತನದ ಬಗ್ಗೆ ಮಾಹಿತಿಯಿತ್ತರು. ಇದರಿಂದ ಸ್ಫೂರ್ತಿಗೊಂಡು ಸೇವಾಧಾಮಕ್ಕೆ 2022 ರಲ್ಲಿ ಪುನಶ್ಚೇತನಕ್ಕೆಂದು ಬಂದರು. ಇಲ್ಲಿ ಪುನಶ್ಚೇತನ ಪಡೆದ ನಂತರ ಸ್ವತಂತ್ರರಾದರು. ಜೀವನದಲ್ಲಿ ಏನಾದರೂ ಉದ್ಯೋಗ ಮಾಡಬೇಕೆಂದು ಚಿಂತಿಸಿ ತಮ್ಮ ಮೊದಲ ಉದ್ಯೋಗವಾದ ಗೇರುಬೀಜದ ಕೆಲಸವನ್ನೇ ಪ್ರಾರಂಭಿಸಿದರು. ಪ್ರಸ್ತುತ ಸುಮತಿ ನಾಯ್ಕ್ ತಮ್ಮ ಪತಿಯ ಸಹಾಯದೊಂದಿಗೆ ಗೇರುಬೀಜ ಕಾರ್ಖಾನೆಯಿಂದ ಕಚ್ಚಾಬೀಜಗಳನ್ನು ತಂದು ಅದನ್ನು ಸುಮತಿ ನಾಯ್ಕ್ ವಿವಿಧ ಗಾತ್ರಗಳಲ್ಲಿ ವಿಂಗಡಿಸಿ ಅದರಿಂದ ಮಾಸಿಕವಾಗಿ ರೂ. 1500 ರಷ್ಟು ಸಂಪಾದಿಸುತ್ತಾರೆ.

ಸುಮತಿ ನಾಯ್ಕ್‌ರವರು ಸೇವಾಭಾರತಿಯಿಂದ ಗಾಲಿಕುರ್ಚಿ, ವಾಕರ್ ಪಡೆಯುವುದಲ್ಲದೆ ದಿವ್ಯಾಂಗ ರಕ್ಷಣಾಸಮಿತಿ ಕೊಡವೂರು ವತಿಯಿಂದ ಧನಸಹಾಯವನ್ನು ಪಡೆದಿರುತ್ತಾರೆ.



**ಬೆನ್ನುಹುರಿ ಅಪಘಾತಕ್ಕೊಳಗಾದ ಸುಮತಿ ನಾಯ್ಕ್‌ರವರಿಗೆ ವೈದ್ಯರು ಆರೋಗ್ಯದಲ್ಲಿ ಚೇತರಿಕೆಯಾಗುತ್ತದೆ ಎಂದು ಭರವಸೆ ನೀಡಿದರು. ತಮ್ಮ ಮಗುವಿನ ಜನನವಾದ 15 ದಿನಗಳ ಬಳಿಕ ಆರೋಗ್ಯದಲ್ಲಿ ಚೇತರಿಕೆ ಇಲ್ಲದ ಕಾರಣ ಕೆ.ಎಂ.ಸಿ. ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದರು. ಚಿಕಿತ್ಸೆ ಪಡೆದು ಮನೆಗೆ ತೆರಳಿದರು. 3–4 ತಿಂಗಳ ಬಳಿಕವೂ ಕಾಲಿನ ಭಾಗಗಳಲ್ಲಿ ಚಲನೆ ಇಲ್ಲದಂತಾದಾಗ ಜೀವನದಲ್ಲಿ ಭರವಸೆ ಕಳೆದುಕೊಂಡು ಕಾಲ ಕಳೆಯುತ್ತಿದ್ದಂತಹ ಸಂದರ್ಭದಲ್ಲಿ ಸೇವಾಭಾರತಿಯ ಕ್ಷೇತ್ರ ಸಂಯೋಜಕರಾದ ಶ್ರೀ ಮನುರವರು ಮನೆಗೆ ಭೇಟಿ ನೀಡಿ ಪುನಶ್ಚೇತನದ ಬಗ್ಗೆ ಮಾಹಿತಿಯಿತ್ತರು. ಇದರಿಂದ ಸ್ಫೂರ್ತಿಗೊಂಡು ಸೇವಾಧಾಮಕ್ಕೆ 2022 ರಲ್ಲಿ ಪುನಶ್ಚೇತನಕ್ಕೆಂದು ಬಂದರು. ಇಲ್ಲಿ ಪುನಶ್ಚೇತನ ಪಡೆದ ನಂತರ ಸ್ವತಂತ್ರರಾದರು.**